ಟಿ.ಸಿ.ಹೆಚ್. ಶಾಲೆಗಳ ಅವ್ಯವಹಾರಗಳು

714 (968) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ಸಿ.ಹೆಚ್. ಶಾಲೆಗಳು ಅಗತ್ಯಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಸನ ಜಿಲ್ಲೆಯ ಭಾರತ್ ಯೂನಿವರ್ಸಿಟಿ ಟಿ.ಸಿ.ಹೆಚ್. ಕಾಲೇಜು ಅಗತ್ಯಕ್ಕಿಂತ ಎಷ್ಟು ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿತು;

ಇ) ಈ ರೀತಿ ಎಷ್ಟು ಬಾರಿ (ವಾರ್ಷಿಕವಾರು) ಎಷ್ಟು ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿದೆ (ವಿವರ ನೀಡುವುದು)

ಈ) ಈ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಪ್ರವೇಶಾವಕಾಶ ಮಾಡಿಕೊಡಲಾಗಿದೆಯೆ; ಇಲ್ಲವಾದಲ್ಲಿ ಇದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾದಂತಲ್ಲವೆ;

ಉ) ಈ ಅನ್ಯಾಯವನ್ನು ಪರಿಗಣಿಸಿ ಈ ಶಿಕ್ಷಣ ಸಂಸ್ಥೆಯನ್ನು ರದ್ದುಪಡಿಸಬಾರದೇಕೆ; ಅಥವಾ ಈ ಶಿಕ್ಷಣ ಸಂಸ್ಥೆಯ ಮಾನ್ಯತೆಯನ್ನು ರದ್ದುಪಡಿಸಿ ಇಂತಹ ಶಿಕ್ಷಣ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಬಾರದೇಕೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) 15

ಇ) 1998-99 ನೇ ಸಾಲಿನಲ್ಲಿ ಒಂದು ಬಾರಿ ಆಡಳಿತ ಮಂಡಳಿ ಕೋಟಾದಡಿ 45 ವಿದ್ಯಾರ್ಥಿಗಳನ್ನು ನಿಗಧಿತ ದಾಖಲಾತಿ ಮಿತಿಗಿಂತ ಹೆಚ್ಚುವರಿಯಾಗಿ ಪ್ರವೇಶ ಮಾಡಿಕೊಂಡಿದೆ.

ಈ) ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ 4-11-99ರ ಮಧ್ಯಂತರ ಆದೇಶದನ್ವಯರಿಟ್ ಅರ್ಜಿ ಸಂ.40173:99) ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಲು ಅವಕಾಶ ಮಾಡಿಕೊಡಲಾಗಿದೆ ಆಡಳಿತ ಮಂಡಳಿಯು ಕಾನೂನುಬಾಹಿರವಾಗಿ ದಾಖಲಾತಿ ಮಿತಿಗಿಂತ ಹೆಚ್ಚುವರಿಯಾಗಿ ಪ್ರವೇಶಗಳನ್ನು ಮಾಡಿಕೊಂಡಿದ್ದರಿಂದ ಆಗಿರುವ ಅನ್ಯಾಯವನ್ನು ಪರಿಗಣಿಸಿ, ಆಡಳಿತ ಮಂಡಳಿಯನ್ನೇ ಜವಾಬ್ದಾರರನ್ನಾಗಿ ಮಾಡಬೇಕಾಗುತ್ತದೆ.

ಉ) ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.